ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಅಭಿಯಂತರರು, ರಸ್ತೆ ಮತ್ತು ಮೂಲಭೂತ ಸೌಕರ್ಯ ರವರು ದಿನಾಂಕ:16.03.2022 ರಂದು ಕೈಗೊಂಡ ಸ್ಥಳ ಪರಿವೀಕ್ಷಣೆ ಟಿಪ್ಪಣಿ.

ಕಾಮಗಾರಿಯ ಹೆಸರು:– Repair and Improvements to drains Mandi Marriyappa Reddy main road in Marriyannapalya inward No.07 Byatarayanapalya".

ಹಾಜರಿದ್ದ ಅಧಿಕಾರಿಗಳು:

1. ಶ್ರೀ. ಸಿ.ಎಂ.ಶಿವಕುಮಾರ್ ಕಾರ್ಯಪಾಲಕ ಅಭಿಯಂತರರು (ರಮೂಸೌ–ಯಲಹಂಕ ವಿಭಾಗ)
2. ಶ್ರೀ.ಬೆಟ್ಟಸ್ವಾಮಿ.ಎಸ್.ಜಿ, ಸಹಾಯಕ ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ–ಯಲಹಂಕ ವಿಭಾಗ)
3. ಶ್ರೀ.ವರುಣ್ ಕುಮಾರ್.ಹೆಚ್, ಸಹಾಯಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ–ಯಲಹಂಕ ವಿಭಾಗ)

ಗುತ್ತಿಗೆದಾರರು:– ಮೆ॥ಕೆ.ಆರ್.ಐ.ಡಿ.ಎಲ್ ಸಂಸ್ಥೆಯ ಪ್ರತಿನಿಧಿ
ಯೋಜನಾ ಸಮಾಲೋಚಕರು:– M/s.Silicon Consulting

******

ಪ್ರಗತಿಯಲ್ಲಿದ್ದ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ Repair and Improvements to drains Mandi Marriyappa Reddy main road in Marriyannapalya inward No.07 Byatarayanapalya". ಕಾಮಗಾರಿಯ ಕೆಳಕಂಡ ರಸ್ತೆಗಳನ್ನು ದಿನಾಂಕ:16.03.2022 ರಂದು ಪರಿವೀಕ್ಷಣೆ ಕೈಗೊಂಡ ಸಂದರ್ಭದಲ್ಲಿ ಕಾರ್ಯಪಾಲಕ ಅಭಿಯಂತರರು, ಕೆಳಕಂಡ ರಸ್ತೆ ಕಾಮಗಾರಿಗಳ ಅಂದಾಜು ಪಟ್ಟಿಯಲ್ಲಿ ಅಳವಡಿಸಿಕೊಂಡಿರುವ ಮತ್ತು ಪ್ರಸ್ತುತ ಅನುಷ್ಠಾನಗೊಳಿಸಲು ಅವಶ್ಯವಿರುವ ಮಾರ್ಪಾಡಿನ ಬಗ್ಗೆ ಕೆಳಕಂಡಂತೆ ಅಭಿಪ್ರಾಯಿಸಿ ಗಮನಕ್ಕೆ ತಂದಿರುತ್ತಾರೆ.

- ಮೂಲ ಕಾಮಗಾರಿಯ ಅಂದಾಜು ಪಟ್ಟಿಯನ್ನು ತಯಾರಿಸುವ ಸಂದರ್ಭದಲ್ಲಿ ಜಕ್ಕೂರು ಮುಖ್ಯ ರಸ್ತೆಯ ಹಾಳಾದ ಸರಪಳಿ ಉದ್ದಳತೆಯಲ್ಲಿ ಡಾಂಬರೀಕರಣ 7.00 ಮೀಟರ್ ಅಗಲಕ್ಕೆ ಅಂದಾಜಿಸಲಾಗಿದ್ದು, ರಸ್ತೆಯ ಎರಡು ಬದಿಯಲ್ಲಿ ಡಾಂಬರು ಮತ್ತು ಚರಂಡಿಯ ಮಧ್ಯದಲ್ಲಿ ಉಳಿದ ಸುಮಾರು 2.00 ಮೀಟರ್ ಅಗಲಕ್ಕೆ **Cobble Pavement** ನಿರ್ಮಾಣಕ್ಕೆ ಅಗತ್ಯವಿರುವ ಅಂಶವನ್ನು ಅಳವಡಿಸಿಕೊಂಡಿದ್ದು, ಅಭಿವೃದ್ಧಿಗೆ ಒಳಪಟ್ಟಿರುವ ಜಕ್ಕೂರು ರಸ್ತೆಯ ಉದ್ದಳತೆಯಲ್ಲಿ ರಸ್ತೆಯ ಅಗಲವು ಹೆಚ್ಚು ಕಡಿಮೆ ಇದ್ದ ಕಾರಣ ಅಭಿವೃದ್ಧಿ ಪಡಿಸುವ ಡಾಂಬರೀಕರಣ ರಸ್ತೆಯ ಅಗಲವನ್ನು ಏಕೀಕೃತವಾಗಿ 9.00 ಮೀಟರ್ ಅಗಲಕ್ಕೆ ಕಾಯ್ದುಕೊಳ್ಳಲು **Cobble Pavement** ನಿರ್ಮಾಣದ ಅಗಲವು 0.50 ಮೀಟರ್‌ನಿಂದ 1.20 ಮೀಟರ್‌ವರೆಗೆ ನಿರ್ಮಿಸಿಕೊಂಡು ಸರಿದೂಗಿಸಲು ಕೈಗೊಂಡ ಕಾರಣ ಅಂದಾಜು ಪಟ್ಟಿಯ ಡಾಂಬರೀಕರಣ ಅಂಶ ಹಾಗೂ **Cobble Pavement** ಅಂಶಗಳ ಪರಿಮಾಣುಗಳಲ್ಲಿ ವ್ಯತ್ಯಯ ಉಂಟಾಗಿರುತ್ತದೆ ವರ್ಕ್ ಸ್ಲೀಪ್ ರಲ್ಲಿ ಅಳವಡಿಸಿಕೊಳ್ಳಲಾಗಿದೆ.

- ಮೂಲ ಕಾಮಗಾರಿಯ ಅಂದಾಜು ಪಟ್ಟಿಯಲ್ಲಿ ಕೆ.ವಿ.ಜಯರಾಂ ರಸ್ತೆಯಿಂದ ಕೆಂಪೇಗೌಡ ವೃತ್ತದವರೆಗಿನ ಡಾಂಬರೀಕರಣ ಅಭಿವೃದ್ಧಿಗಾಗಿ ಅಗತ್ಯವಿರುವ ಅಂಶಗಳನ್ನು ಅಳವಡಿಸಿಕೊಂಡಿದ್ದು, ಮಾನ್ಯ ಸ್ಥಳೀಯ ಶಾಸಕರು ಕಾಮಗಾರಿ ಪರಿವೀಕ್ಷಣೆ ಸಮಯದಲ್ಲಿ ಪ್ರಜಾಪಿತ ಬ್ರಹ್ಮಕುಮಾರಿ ವಿದ್ಯಾಲಯದ ಸುಮಾರು 85.00 ಮೀಟರ್ ಉದ್ದದ 8.20 ಮೀಟರ್ ಅಗಲದ ರಸ್ತೆಯನ್ನು ಡಾಂಬರೀಕರಣಗೊಳಿಸಿ ಅಭಿವೃದ್ಧಿಗೊಳಿಸಲು ಸೂಚಿಸಿರುವ ಅಂಶವನ್ನು ತಪಾಸಣೆ ಸಂಧರ್ಬದಲ್ಲಿ ಸಂಭಂಧಪಟ್ಟ ಅಭಿಯಂತರರು ಮುಖ್ಯ ಅಭಿಯಂತರವರ ಗಮನಕ್ಕೆ ತರಲಾಗಿದ್ದು, ಇದರಿಂದಾಗಿ ಡಾಂಬರೀಕರಣ ಅಭಿವೃದ್ಧಿಗಾಗಿ ಅಗತ್ಯವಿರುವ ಅಂಶಗಳ ಪರಿಮಾಣು ಹೆಚ್ಚಾಗಿದ್ದು, ಉಂಟಾಗುವ ಹೆಚ್ಚುವರಿ ಪರಿಮಾಣಗಳಿಗೆ ವರ್ಕ್ ಸ್ಲೀಪ್ ರಲ್ಲಿ ಅಳವಡಿಸಿಕೊಳ್ಳಲಾಗಿದೆ.

- ಕಾರ್ಯಪಾಲಕ ಅಭಿಯಂತರವರು ಸೂಚಿಸಿರುವ ಅಂಶಗಳನ್ನು ಅಳವಡಿಸಕೊಳ್ಳುವ ಬಗ್ಗೆ ಯೋಜನಾ ಸಮಾಲೋಚಕರಿಂದ ತಾಂತ್ರಿಕ ವರದಿ, ವಿನ್ಯಾಸ ಇತ್ಯಾದಿ ತಯಾರಿಸಿಕೊಂಡು ಅವಶ್ಯವಿರುವ ಪೂರಕ ಅಂಶಗಳನ್ನು ಅಳವಡಿಸಿಕೊಂಡು ಪುನರಾವರ್ತನೆ (Duplicacy of work) ಆಗದಂತೆ ಕಾಮಗಾರಿ ಪೂರ್ಣಗೊಳಿಸಲು ಸೂಚಿಸಲಾಗಿರುತ್ತದೆ.

ಈ ಮೇಲ್ಕಂಡ ಅಂಶಗಳನ್ನು ಪರಿಗಣಿಸಿ ಮಂಜೂರಾದ ಅಂದಾಜು ಮೊತ್ತದೊಳಗೆ ಉಳಿತಾಯವಾಗುವ ಅನುದಾನವನ್ನು ಬಳಸಿಕೊಳ್ಳಲು ಸೂಕ್ತ ತಾಂತ್ರಿಕ ವರದಿಯೊಂದಿಗೆ ಅವಶ್ಯವಿರುವ ಅಂಶ ಮತ್ತು ಪರಿಮಾಣಗಳನ್ನು ಅಳವಡಿಸಿಕೊಂಡು ಯೋಜನಾ ಸಮಾಲೋಚಕರ ಶಿಫಾರಸ್ಸಿನೊಂದಿಗೆ Work slip /EIRL ಅನ್ನು ಸಿದ್ಧಪಡಿಸಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದುಕೊಳ್ಳುವ ಷರತ್ತಿಗೆ ಒಳಪಟ್ಟು ಕಾಮಗಾರಿಯನ್ನು ನಿಗಧಿತ ಕಾಲಾವಧಿಯೊಳಗೆ ಸಮರ್ಪಕವಾಗಿ ನಿರ್ವಹಿಸಿ ಪೂರ್ಣಗೊಳಿಸಲು ಕ್ರಮ ವಹಿಸುವಂತೆ ಕಾರ್ಯಪಾಲಕ ಅಭಿಯಂತರರು ರಸ್ತೆ ಮೂಲಭೂತ ಸೌಕರ್ಯ ವಿಭಾಗ ರವರಿಗೆ ಸೂಚಿಸಿದೆ.

14/3/2022

ಮುಖ್ಯ ಅಭಿಯಂತರರು
ರಸ್ತೆ ಮೂಲಭೂತ ಸೌಕರ್ಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:
1. ಅಧೀಕ್ಷಕ ಅಭಿಯಂತರರು, ರಮೂಸೌ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
2. ಕಾರ್ಯಪಾಲಕ ಅಭಿಯಂತರರು, ರಮೂಸೌ–ದಕ್ಷಿಣ ವಿಭಾಗ ರವರಿಗೆ ಸೂಕ್ತ ಕ್ರಮಕ್ಕಾಗಿ.
3. ಲೆಕ್ಕಾಧಿಕಾರಿಗಳು(ರಮೂಸೌ) ರವರಿಗೆ ಸೂಕ್ತ ಕ್ರಮಕ್ಕಾಗಿ.
4. ಕಛೇರಿ ಕಡತಕ್ಕೆ.